

ವಿನ್ಯಾಸ ಬಯಸುವ ಕಲಾ ರಸಿಕರಿಗೆ ಅವರು ಹೀಗೆ ನೆರವಾಗುತ್ತಾರೆ. ಹಳೆಯ ಕ್ಯಾಸೆಟ್‌ಗಳು ಮತ್ತದರ ಕವರ್‌ಗಳು, ಹಳೆಯ ಗ್ರಾಮಾಫೋನ್ ಪ್ಲೇಟ್‌ಗಳ ಸಹಿತ ಇನ್ನೂ ಹತ್ತು ಹಲವು ಬಗೆಯ ವಸ್ತುಗಳ ಜೊತೆ ಅರಳಿ ಎಲೆಯನ್ನು ಬಳಸಿ ಕಲಾಕೃತಿಯನ್ನಾಗಿಸುವ ಇವರ ಕಲಾವಂತಿಕೆ ಅನನ್ಯ.

ರಾಜಧಾನಿ ಬೆಂಗಳೂರಿನಲ್ಲಿ ಎಲ್ಲಿಯೇ ವ್ಯಾಪಾರ ಮೇಳವಿರಲಿ ಇಲ್ಲವೇ ಶಾಪಿಂಗ್ ಮಾಲ್‌ಗಳಲ್ಲಿ ಏರ್ಪಡಿಸುವ ಮೇಳಗಳೇ ಇರಲಿ ಅಲ್ಲೆಲ್ಲ ಇವರು ತಪ್ಪದೇ ಹಾಜರಿರುತ್ತಾರೆ. ತಮ್ಮದೇ ಒಂದು ಸ್ಟಾಲ್ ಕೊಂಡು ತಾವೇ ತಯಾರಿಸಿದ ಕಲಾಕೃತಿಗಳನ್ನು ಇಟ್ಟು ಮಾರಾಟ ಮಾಡುತ್ತಾರೆ.

ನಗರದಲ್ಲಿ ಸ್ವಂತದ್ದೊಂದು ಸ್ಟುಡಿಯೊ ಇಟ್ಟುಕೊಂಡಿರುವ ಜಗದೀಶ ಹಲವು ಸಂಶೋಧನೆಗಳನ್ನು ನಡೆಸಿ, ಜನರ ಅಗತ್ಯಗಳನ್ನು ಪೂರೈಸುವ ಉಮೇದಿಯೊಂದಿಗೆ ಕಾರ್ಯಪ್ರವೃತ್ತರಾಗುತ್ತಾರೆ. ಗೃಹಾಲಂಕಾರ ಅಥವಾ ಆಫೀಸ್ ಒಳಾಂಗಣದ ಅಲಂಕಾರಕ್ಕೆ ಬೇಕಾಗುವ ವಸ್ತುಗಳನ್ನು ಇವರು ರೂಪಿಸುತ್ತಾರೆ. ಕಲಾ ವಲಯದಲ್ಲಿ ಆಗುವ ಹೊಸ ಆವಿಷ್ಕಾರಗಳನ್ನು, ಪ್ರಯೋಗಗಳನ್ನು ಗಮನಿಸುತ್ತಲೇ ಇರುತ್ತಾರೆ. ಇಂಡಿಯಾದ ಮಾರುಕಟ್ಟೆಗೆ ಸೂಕ್ತವಾಗುವಂಥ ಕಲಾ ಪ್ರಯೋಗಗಳನ್ನು ತಾವೂ ಅಳವಡಿಸಿಕೊಳ್ಳುವ ಸಾಹಸ ಮಾಡುತ್ತಾರೆ. ಅದಕ್ಕೆ ಬೇಕಾದ ತಂತ್ರಜ್ಞಾನ ಮತ್ತು ಕೌಶಲ್ಯವನ್ನು ಆಸ್ಥೆಯಿಂದ ಸಿದ್ಧಿಸಿಕೊಳ್ಳುತ್ತಾರೆ. ಅಂಥ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದರಿಂದಲೇ ಇಂದು ಇಷ್ಟು ಭಿನ್ನವಾಗಿ ತಮ್ಮನ್ನು ತಾವು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ ಎನ್ನುವ ವಿನಯ ಅವರದು.

ಅತ್ಯಂತ ಕಮ್ಮಿ ಬೆಲೆಗೆ ಒಂದು ಒಳ್ಳೆಯ ಅಲಂಕಾರಿಕ ವಸ್ತುವನ್ನು ಗ್ರಾಹಕರು ಕೊಂಡುಕೊಳ್ಳಬೇಕು. ಅದು ಬಹುಕಾಲ ಅವರೊಂದಿಗೆ ಒಂದು ಕಲಾ ಆಸಕ್ತಿಯ ಪ್ರೇರಣೆಯಾಗಿ ಇರಬೇಕು. ಇದಕ್ಕಿಂತ ತನ್ನಂಥ ಒಬ್ಬ ಕಲಾವಿದನಿಗೆ ಇನ್ನೇನು ಬೇಕು ಎನ್ನುವ ಸರಳ ಮತ್ತು ಅಷ್ಟೇ ಸಹಜವಾದ ಆತ್ಮತೃಪ್ತಿಯ ನೆಲೆಗಳನ್ನು ಜಗದೀಶ ಈ ಮೂಲಕ ಕಂಡುಕೊಂಡಿದ್ದಾರೆ. ಇಲ್ಲಿನ ಕಲಾಕೃತಿಗಳು ಅವರ ಕೆಲವು ಝಲಕ್. (ಸಂಪರ್ಕಕ್ಕೆ: 9845927539).

